ಎಂ.ವಿ.ಸಿಃ 388/2025
ಪಿ.ಡಬ್ಲ್ಯೂ : 02

ದಿನಾಂಕ 10-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರವರಿಂದಃ

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-17 | ಕೇಸ್ ಶೀಟ್, |

**ನಿಪಿ.12 ಮತ್ತು 13 ರ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು, ನಿಪಿ.12(ಎ) ಮತ್ತು 13(ಎ) ಎಂದು ಗುರುತಿಸಲಾಯಿತು.**

ಪಾಟೀ ಸವಾಲುಃ **2** ನೇ ಎದುರುದಾರ ಪರ ವಕೀಲರಿಂದಃ

ಅರ್ಜಿದಾರರಿಗೆ ವಿಶ್ರಾಂತಿ ಬೇಕು ಎಂದು ನಾನು ಹೇಳಿರುತ್ತೇನೆ . ಅರ್ಜಿದಾರರಿಗೆ ಈ ಬಗ್ಗೆ ಮೆಡಿಕಲ್ ಸರ್ಟಿಫಿಕೇಟ್ ಕೊಟ್ಟಿರುತ್ತೇವೆ. ಅದನ್ನು ನ್ಯಾಯಲಯಕ್ಕೆ ಹಾಜರುಪಡಿಸುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕಾಪಿ ಇದ್ದರೇ ಹಾಜರುಪಡಿಸುತ್ತೇವೆ ಎಂದು ತಿಳಿಸಿರುತಾರೆ . ಅರ್ಜಿದಾರರಿಗೆ ಯಾವುದೇ ವಿಶ್ರಾಂತಿಯ ಅಗತ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ 2 ಪ್ಯಾರಾದಲಿ ಹೇಳಿರುವ ರೀತಿ ಅರ್ಜಿದಾರರಿಗೆ ಯಾವುದೇ ರೀತಿ ತೊಂದರೆ ಇರಲಿಲ್ಲ ಮತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ 3 ಪ್ಯಾರಾದಲ್ಲಿ ಹೇಳಿರುವಂತೆ ಯಾವುದೇ ಚಿಕಿತ್ಸೆನ್ನು ಕೂಡ ನಾನು ನೀಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅಳವಡಿಸಿರುವ ಒಳಸಾದನವನ್ನು ಬಿಟ್ಟು ಬೇರೆ ಚಿಕಿತ್ಸೆ ಬಾಕಿ ಇಲ್ಲ . ಅರ್ಜಿದಾರರಿಗೆ ಅಳವಡಿಸಿದ ಒಳಸಾಧನವನ್ನು ತೆಗೆಯಲೇಬೇಕು ಎಂಬ ಅವಶ್ಯಕತೆ ಇಲ್ಲ ಎಂದರೆ ಸರಿ . ಸಾಕ್ಷಿ ಮುಂದುವರಿದು ಅರ್ಜಿದಾರರು ಸಣ್ಣ ಪ್ರಾಯ ಆಗಿರುವುದರಿಂದ ತೆಗೆದದರೇ ಒಳ್ಳೆಯದು ಎಂದು ತಿಳಿಸಿರುತಾರೆ . ಅರ್ಜಿದಾರರಿಗೆ ಸಂಪೂರ್ಣ ದೇಹಕ್ಕೆ ಎಷ್ಟು ಅಂಗನ್ಯೂನತೆ ಆಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ . ಅರ್ಜಿದಾರರಿಗೆ

ನಾನು ಯಾವ ಯಾವ ಪರೀಕ್ಷೆ ಮಾಡಿದ್ದೇನೆ ಮತ್ತು ಅದರ ರಿಸಲ್ಟ್ ಏನಾಗಿದೆ ಎಂದು ಕೇಸ್ ಶೀಟ್ ನಲ್ಲಿ ನಮೂದಿಸಿದ್ದೇನೆ . ನಾನು ಅರ್ಜಿದಾರರಿಗೆ ಯಾಂತ್ರಿಕವಾಗಿ 17.14% ಎಂದು ಅಂಗನ್ಯೂನತೆ ಯನ್ನು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ರೀತಿಯ ಒಳಸಾಧನವನ್ನು ನಾನು ಅಳವಡಿಸಿಲ್ಲ ಎಂದರೆ ಸರಿಯಲ್ಲ. ಒಳಸಾಧನವನ್ನು ಅಳವಡಿಸದೇ ಇರುವುದರಿಂದ ತೆಗೆಯುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಏನು ಕೆಲಸ ಮಾಡುತಿದ್ದಾರೆ ಎಂದು ನಾನು ವೈಯಕ್ತಿಕವಾಗಿ ಪರಿಶೀಲನೆ ಮಾಡಿಲ್ಲ. ಅರ್ಜಿದಾರರು ಅವರ ದೈನಂದಿನ ಕಾರ್ಯವನ್ನು ಮಾಡಿಕೊಳ್ಳಬಹುದು. ಅರ್ಜಿದಾರರಿಗೆ ನಾನು ಹೇಳುವಂತಹ ಅಂಗನ್ಯೂನತೆ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.